ಕರ್ನಾಟಕ ಲೋಕಾಯುಕ್ತ

ಸಂಖ್ಯೆ: ಕಂಪ್ಲೆಂಟ್/ಉಪಲೋಕ್/ಎಂ.ವೈ.ಎಸ್.–932/2014/ಪಿಪಿ

ಬಹುಮಹಡಿಗಳ ಕಟ್ಟಡ,
ಡಾ:ಬಿ.ಆರ್.ಅಂಬೇಡ್ಕರ್ ವೀಧಿ,
ಬೆಂಗಳೂರು.
ದಿನಾಂಕ : 25/04/2018

## ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಕಲಂ 12(3) ರನ್ವಯ ವರದಿ

ವಿಷಯ: (1) ಶ್ರೀಮತಿ ಮಾಲತಿ, ಹಿಂದಿನ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು, ಶಿರ್ವ ಗ್ರಾಮ ಪಂಚಾಯತ್, ಉಡುಪಿ ತಾಲ್ಲೂಕು ಮತ್ತು ಜಿಲ್ಲೆ ಮತ್ತು, (2) ಶ್ರೀ ಹಸನಬಾ ಶೇಖ್, ಅಧ್ಯಕ್ಷರು, ಶಿರ್ವ ಗ್ರಾಮ ಪಂಚಾಯತ್, ಉಡುಪಿ ತಾಲ್ಲೂಕು ಮತ್ತು ಜಿಲ್ಲೆ ಇವರುಗಳು ಸರ್ಕಾರಿ/ ಸಾರ್ವಜನಿಕ ನೌಕರರಾಗಿ ದುರ್ನಡತೆ ಎಸಗಿರುವ ಕುರಿತು ವರದಿ.

*****

ಶ್ರೀ ದೇವದಾಸ ಹೆಗ್ಡೆ ಬಿನ್ ಲೇಟ್ ಚಂದ್ರಹಾಸ ಹೆಗ್ಡೆ, ನ್ಯಾರ್ಮ ಹೊಸ ಮನೆ, ಶಿರ್ವ, ಉಡುಪಿ ತಾಲ್ಲೂಕು ಮತ್ತು ಜಿಲ್ಲೆ (ಇನ್ನು ಮುಂದೆ 'ದೂರುದಾರರು' ಎಂದು ಕರೆಯಲ್ಪಡುತ್ತಾರೆ) ರವರು ದೂರನ್ನು ಸಲ್ಲಿಸಿರುತ್ತಾರೆ. (1) ಶ್ರೀಮತಿ ಮಾಲತಿ, ಹಿಂದಿನ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು, ಶಿರ್ವ ಗ್ರಾಮ ಪಂಚಾಯತ್, ಉಡುಪಿ ತಾಲ್ಲೂಕು ಮತ್ತು ಜಿಲ್ಲೆ ಮತ್ತು, (2) ಶ್ರೀ ಹಸನಬಾ ಶೇಖ್, ಅಧ್ಯಕ್ಷರು, ಶಿರ್ವ ಗ್ರಾಮ ಪಂಚಾಯತ್, ಉಡುಪಿ ತಾಲ್ಲೂಕು ಮತ್ತು ಜಿಲ್ಲೆ (ಇನ್ನು ಮುಂದೆ '1 ಮತ್ತು 2ನೇ ಎದುರುದಾರರುಗಳು' ಎಂದು ಕರೆಯಲ್ಪಡುತ್ತಾರೆ) ರವರುಗಳ ವಿರುದ್ಧ ತನಿಖೆ ನಡೆಸಲಾಗಿರುತ್ತದೆ. ಸದರಿ ದೂರಿನ ಆಧಾರದ ಮೇಲೆ ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 9 ರಡಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ತನಿಖೆಗೆ ಆದೇಶಿಸಲಾಗಿರುತ್ತದೆ.

2. ದೂರಿನ ಸಂಕ್ಷಿಪ್ತ ವಿವರ: ದೂರುದಾರರ ಕುಟುಂಬಕ್ಕೆ ಸಂಬಂಧಪಟ್ಟಂತೆ ಸ್ಥಿರ ಆಸ್ತಿಗಳು ಶಿರ್ವ ಗ್ರಾಮ ದಲಿದ್ದು ಸಾರ್ವಜನಿಕ ಉಪಯೋಗಕ್ಕೆ ಸ್ವತ್ತುಗಳನ್ನು ದಾನ ಮಾಡಿರುತ್ತಾರೆ. 15 ಮತ್ತು 16ನೇ ವಾರ್ಡ್‌ನಲ್ಲಿ ನಿರ್ಮಿಸಿದ ರಸ್ತೆಯು ಸುಮಾರು 100 ವರ್ಷಗಳ ಹಳೆಯ ರಸ್ತೆಯಾಗಿದ್ದು ಪಿರ್ಯಾದುದಾರರ ಕುಟುಂಬದವರಾದ "ರಾಧಮ್ಮ" ಎನ್ನುವವರ ಹೆಸರನ್ನು ರಾಧಮ್ಮ ರಸ್ತೆ ಎಂದು ಹೆಸರಿಡಲಾಗಿರುತ್ತದೆ.

ಶ್ರೀಧರ ಪೂಜಾರಿ ಎನ್ನುವವರು ಸದರಿ ರಾಧಮ್ಮ ರಸ್ತೆಯ ಬಾಜುವಿನಲ್ಲಿ ವಾಣಿಜ್ಯ ಕಟ್ಟಡ ಕಟ್ಟಲು ಪ್ರಾರಂಭಿಸಿದ್ದು ಕಟ್ಟಡ ನಿಯಮಗಳನ್ನು ಉಲ್ಲಂಘಿಸಿ ಕಟ್ಟುತ್ತಿರುತ್ತಾರೆ. ಈ ಬಗ್ಗೆ ಕ್ರಮ ಜರುಗಿಸಲು ಎದುರುದಾರರಿಗೆ ಮನವಿ ಸಲ್ಲಿಸಿದರೂ ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲ್ಲೂಕು ಪಂಚಾಯತ್,

ಉಡುಪಿ ರವರಿಗೆ ಮನವಿ ಸಲ್ಲಿಸಿದರೂ ಕ್ರಮ ಜರುಗಿಸಿರುವುದಿಲ್ಲ. ಕಟ್ಟಡ ಕಟ್ಟಲು ನಗರ ಮತ್ತು ಗ್ರಾಮಾಂತರ ಯೋಜನಾಧಿಕಾರಿಗಳಿಂದ ಅನುಮೋದನೆ ಪಡೆದಿರುವುದಿಲ್ಲ. ಕಟ್ಟಡ ಕಟ್ಟಲು ನೀಡಿದ ಪರವಾನಗಿ ನಂ. 21/2013-14 ಆದೇಶವು ಕಾನೂನು ಬಾಹಿರವಾಗಿರುತ್ತದೆ. ಎದುರುದಾರರು ಲಂಚ ಪಡೆದು ಪರವಾನಗಿ ನೀಡಿರುತ್ತಾರೆ. ಶ್ರೀಧರ ಪೂಜಾರಿಯವರು ನಿಯಮಗಳ ಉಲ್ಲಂಘನೆ ಮಾಡಿ ಸಾರ್ವಜನಿಕ ರಸ್ತೆಯನ್ನು ಒತ್ತುವರಿ ಮಾಡಿ ವಾಣಿಜ್ಯ ಕಟ್ಟಡವನ್ನು ನಿರ್ಮಾಣ ಮಾಡುತ್ತಿರುತ್ತಾರೆ. ಸೆಟ್‌ಬ್ಯಾಕ್ ಬಿಟ್ಟಿರುವುದಿಲ್ಲ. ಜಿ+2 ಮಹಡಿ ಕಟ್ಟಲು ನಗರ ಮತ್ತು ಗ್ರಾಮಾಂತರ ಯೋಜನಾಧಿಕಾರಿಗಳ ಅನುಮೋದನೆಯಾಗಿರುವುದಿಲ್ಲ. ನಕ್ಷೆ ಪ್ರಕಾರ ಕಟ್ಟಡ ಕಟ್ಟುತ್ತಿರುವುದಿಲ್ಲ. ಎದುರುದಾರರು ನಿಯಮಗಳ ಪ್ರಕಾರ ಕ್ರಮ ಜರುಗಿಸದೆ ಕರ್ತವ್ಯ ಚ್ಯುತಿ ಎಸಗಿರುತ್ತಾರೆ. ಕಟ್ಟಡ ಕಟ್ಟಲು ತಾಂತ್ರಿಕ ಅನುಮೋದನೆಯನ್ನು ನಗರ ಯೋಜನಾಧಿಕಾರಿಗಳಿಂದ ಪಡೆಯದ ಕಾರಣ ಕಟ್ಟಡ ಮಾಲೀಕರಿಗೆ ದಿನಾಂಕ: 06/01/2014 ರಂದು ನೋಟಿಸನ್ನು 1ನೇ ಎದುರುದಾರರು ನೀಡಿದ್ದು ಮುಂದಿನ ಯಾವುದೇ ಕ್ರಮ ಜರುಗಿಸಿರುವುದಿಲ್ಲ.

ಪರವಾನಗಿ ಪ್ರತಿ ಪರಿಶೀಲಿಸಲಾಗಿ ಸರ್ವೆ ನಂ. 308/13ಎ/ಪಿ4 ಮತ್ತು 22ಪಿ3 ಜಾಗದಲ್ಲಿ ದಿನಾಂಕ: 18/05/2013 ರಿಂದ 17/05/2014 ಹಾಗೂ 18/05/2014 ರಿಂದ 17/05/2015 ರವರೆಗೆ ವಾಣಿಜ್ಯ ಕಟ್ಟಡ ಕಟ್ಟಲು ನೀಡಲಾಗಿದೆ. ಪಂಚಾಯತಿ ರಸ್ತೆಯಿಂದ 15 ಮೀಟರ್ ಬಿಟ್ಟು ಕಟ್ಟಡ ನಿರ್ಮಿಸತಕ್ಕದ್ದು ಎಂದು ಷರತ್ತು ವಿಧಿಸಿರುತ್ತಾರೆ. 1ನೇ ಎದುರುದಾರರು ಕಾರ್ಯನಿರ್ವಾಹಕ ಅಧಿಕಾರಿ ಹಾಗೂ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ನೀಡಿದ ಮನವಿ ಪತ್ರದ ಪ್ರತಿಗಳನ್ನು ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆಯವರು 1ನೇ ಎದುರುದಾರರಿಗೆ ಬರೆದ ಪತ್ರದ ಪ್ರತಿ ಲಗತ್ತಿಸಿದ್ದು ಪರಿಶೀಲಿಸಲಾಗಿ ಕಟ್ಟಡ ನಿರ್ಮಿಸಲು ಯಾವುದೇ ತಾಂತ್ರಿಕ ಅಭಿಪ್ರಾಯ ನೀಡಿರುವುದಿಲ್ಲ ಎಂದು ನಮೂದಿಸಿದ ದಾಖಲೆಗಳನ್ನು ಲಗತ್ತಿಸಿರುತ್ತಾರೆ.

3. ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲ್ಲೂಕು ಪಂಚಾಯತ್, ಉಡುಪಿ ರವರ ತನಿಖಾ ವರದಿ:

ಶಿರ್ವ ಗ್ರಾಮ ಪಂಚಾಯತ್‌ನ ಸರ್ವೆ ನಂ. 309/13ಎ1ಪಿ4 ಮತ್ತು 308/22ಪಿ3 ರಲ್ಲಿರುವ ಒಟ್ಟು 12.50 ಸೆಂಟ್ಸ್ ಸ್ಥಳವು ಶ್ರೀಧರ್ ಪೂಜಾರಿ ಬಿನ್ ಐತಪ್ಪ ಪೂಜಾರಿಯವರ ಹೆಸರಿನಲ್ಲಿರುತ್ತದೆ. ಕಟ್ಟಡ ಪರವಾನಿಗೆ ಕೋರಿಕೊಂಡು ಅರ್ಜಿ ಸ್ಥಳದ ದಸ್ತಾವೇಜು ಪ್ರತಿ ನೀಲಿ ನಕಾಶೇ ಕನ್ವರ್ಶನ್ ಪ್ರತಿ, ಐಸ್ಕೆಚ್, ಅಂದಾಜು ಪಟ್ಟಿ ಹಾಗೂ ಗ್ರಾಮ ಪಂಚಾಯತ್‌ನ ಷರತ್ತಿಗೊಳ್ಳಪಟ್ಟು ಕಟ್ಟಡ ರಚಿಸುವುದಾಗಿ ಕರಾರು ಪತ್ರಗಳೊಂದಿಗೆ ದಿನಾಂಕ: 15/04/2013 ರಂದು ಗ್ರಾಮ ಪಂಚಾಯತ್‌ಗೆ ಅರ್ಜಿ ನೀಡಿರುತ್ತಾರೆ. ದಿನಾಂಕ: 18/05/2013ರ ಸಾಮಾನ್ಯ ಸಭೆಯಲ್ಲಿ ಸದರಿಯವರ ಅರ್ಜಿದಾರರ ಪತ್ರಗಳನ್ನು ಪರಿಶೀಲಿಸಿ

N. Anand

ಇಲಾಖೆಯ ನಿರಾಕ್ಷೇಪಣಾ ಪತ್ರ ಪಡೆದು ಮುಂದಿನ ಕ್ರಮ ಕೈಗೊಳ್ಳಲಾಗುವುದು ಎಂದು ಮಾಹಿತಿ ಸಲ್ಲಿಸಿರುತ್ತಾರೆ.

ಫಿರ್ಯಾದುದಾರರು ತಮ್ಮ ಪತ್ರ ದಿನಾಂಕ: 03/09/2015ರಲ್ಲಿ ಅಕ್ರಮವಾಗಿ ಕಟ್ಟಿದ ಕಟ್ಟಡಕ್ಕೆ ಮೆಸ್ಕಾಂನಿಂದ ನೀಡಿದ ವಿದ್ಯುತ್ ಸಂಪರ್ಕದ ಬಗ್ಗೆ ದೃಢೀಕರಣ ಪತ್ರ ಸಲ್ಲಿಸಿರುತ್ತಾರೆ.

5. ಶಿರ್ವ ಗ್ರಾಮದ ಪಂಚಾಯತ್ ಅಭಿವೃದ್ಧಿ ಅಧಿಕಾರಿಯವರ ವರದಿ ದಿನಾಂಕ: 26/04/2016:

ಶ್ರೀಧರ ಪೂಜಾರಿ ಎಂಬುವರು ಪಂಚಾಯತಿಗೆ ಸಲ್ಲಿಸಿದ ದಾಖಲೆಗಳ ಆಧಾರದಲ್ಲಿ ಪರವಾನಿಗೆ ನೀಡಿದ್ದು ಸದರಿಯವರ ಕಟ್ಟಡ ಮುಕ್ತಾಯಗೊಂಡಿರುತ್ತದೆ. ದೂರುದಾರರ ದೂರನ್ನು ಪಂಚಾಯತ್ ಪರಿಶೀಲಿಸಿದ್ದು, ಸದರಿಯವರು ತಿಳಿಸುವ ರಸ್ತೆಯು ಪಂಚಾಯತ್ ರಸ್ತೆಯಾಗಿದ್ದು, ನಿಗದಿತ ಸೆಟ್ ಬ್ಯಾಕ್ ಬಿಟ್ಟು ಕಟ್ಟಡ ನಿರ್ಮಿಸಿರುವುದನ್ನು ಮನಗಂಡು ಸದರಿ ಕಟ್ಟಡಕ್ಕೆ ಕಟ್ಟಡ ನಂಬರ್ ನೀಡಲಾಗಿದೆ. ಸಾಮಾನ್ಯ ಸಭೆಯ ನಿರ್ಣಯದಂತೆ ಕಟ್ಟಡಕ್ಕೆ ನಂಬರ್ ಹಾಕಿ ವಿದ್ಯುತ್ ಜೋಡಣೆಗೆ ನಿರಾಕ್ಷೇಪಣಾ ಪತ್ರ ನೀಡಲಾಗಿದೆ. ಸದರಿ ಸಾಮಾನ್ಯ ಸಭೆಗಳ ನಿರ್ಣಯಗಳ ಪ್ರತಿಗಳನ್ನು ಸಲ್ಲಿಸಲಾಗಿದೆ.

6. ಕಾರ್ಯಪಾಲಕ ಅಭಿಯಂತರರು–2, ತಾಂತ್ರಿಕ ವಿಭಾಗ, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ರವರ ವರದಿ:

ಶಿರ್ವ ಗ್ರಾಮದ ಸರ್ವೆ ನಂ.308/13ಎ/1ಪಿ4 ಮತ್ತು 22ಪಿ3 ರಲ್ಲಿ ವಾಣಿಜ್ಯ ಕಟ್ಟಡ ನಿರ್ಮಾಣ ಮಾಡಲು ಶ್ರೀ ಶ್ರೀಧರ್ ಪೂಜಾರಿ ರವರಿಗೆ ಪರವಾನಿಗೆಯನ್ನು 1 ಮತ್ತು 2ನೇ ಎದುರುದಾರರುಗಳು ನೀಡಿದ್ದಾರೆ. ಶ್ರೀ ಶ್ರೀಧರ್ ಪೂಜಾರಿಯವರು ತಮ್ಮ ಹಳೆಯ ಕಟ್ಟಡವನ್ನು ಕೆಡವಿ ಹಾಕಿ ಇರುವ ಹಳೆಯ ಕಾಂಪೌಂಡ್ ಗೋಡೆಯಿಂದ 3 ಅಡಿ ಜಾಗವನ್ನು ಬಿಟ್ಟು ವಾಣಿಜ್ಯ ಕಟ್ಟಡವನ್ನು ನಿರ್ಮಿಸಿದ್ದಾರೆ. ವಾಣಿಜ್ಯ ಕಟ್ಟಡದ ಬಲಭಾಗದ ರಸ್ತೆಯು ಶಿರ್ವ ಗ್ರಾಮದ ಒಳ ರಸ್ತೆಯಾಗಿದ್ದು, ಸದರಿ ರಸ್ತೆಯ ಅಗಲವು 16 ಅಡಿ ಇರುತ್ತದೆ. ಸದರಿ ರಸ್ತೆಯ ಎಡ ಭಾಗದಲ್ಲಿ ಚರಂಡಿ ಇದ್ದು, ಚರಂಡಿಯನ್ನು ಬಿಟ್ಟು ಸದರಿ ವಾಣಿಜ್ಯ ಕಟ್ಟಡದ ಹಳೆಯ ಕಾಂಪೌಂಡ್ ಗೋಡೆ ಇದ್ದು, ಹಳೆಯ ಕಾಂಪೌಂಡ್ ಗೋಡೆಯಿಂದ 3 ಅಡಿ ಭಾಗವನ್ನು ಬಿಟ್ಟು ವಾಣಿಜ್ಯ ಕಟ್ಟಡವನ್ನು ನಿರ್ಮಿಸಿದ್ದಾರೆ. ಯಾವುದೇ ಸೆಟ್‌ಬ್ಯಾಕ್‌ನ ನಿಯಮ ಉಲ್ಲಂಘನೆಯಾಗಿರುವುದಿಲ್ಲ. ದಿನಾಂಕ: 17/05/2015 ರವರೆಗೆ ನೆಲ ಮತ್ತು 1ನೇ ಅಂತಸ್ತು ವಾಣಿಜ್ಯ 2ನೇ ಅಂತಸ್ತು ವಾಸ್ತವ್ಯ ಎರಡು ಮನೆಗಳು ಎಂದು ಹಿಂದೆ ನೀಡಿದ ಕಟ್ಟಡ ಪರವಾನಿಗೆಯನ್ನು ನವೀಕರಿಸಿದ್ದಾರೆ. ಈ ಸಂಸ್ಥೆಗೆ ದೂರು ಸಲ್ಲಿಸಿದ ನಂತರ ಕಟ್ಟಡ ನಿರ್ಮಾಣದ ಕೆಲಸವನ್ನು ನಿಲ್ಲಿಸಿದ್ದಾರೆ.

N. Ananda

ಷರತ್ತು ವಿಧಿಸಿ ಪರವಾನಿಗೆ ನೀಡಿರುತ್ತಾರೆ. ಶ್ರೀಧರ್ ಪೂಜಾರಿಯವರು ಕಟ್ಟುವ ಕಟ್ಟಡವು ಲೋಕೋಪಯೋಗಿಯ ಮಧ್ಯಭಾಗದಿಂದ 22 ಮೀಟರು ಅಂತರವಿರುತ್ತದೆ ಹಾಗೂ ಕಟ್ಟಡ ಸೆಟ್‌ಬ್ಯಾಕ್ 3 ಫೀಟು ಬಿಟ್ಟು ಕಟ್ಟಿರುತ್ತಾರೆ. ಸದರಿಯವರು ಕಟ್ಟುವ ಕಟ್ಟಡ ಪಶ್ಚಿಮ ಬದಿಯಲ್ಲಿ ಖಾಸಗಿ ರಸ್ತೆಯ ಬದಿಯಲ್ಲಿ ಶ್ರೀಧರ್ ಪೂಜಾರಿಯವರ ಹಳೆಯ ಆವರಣಗೋಡೆ ಇದ್ದು, ಸದರಿ ಆವರಣ ಗೋಡೆಯಿಂದ 3 ಫೀಟು ಅಂತರ ಬಿಟ್ಟು ರಚಿಸಿರುತ್ತಾರೆ. ಯಾವುದೇ ರಸ್ತೆ ಆಕ್ರಮಣ ಆಗಿರುವುದಿಲ್ಲ.

ತನಿಖಾ ವರದಿಯೊಂದಿಗೆ ಪರವಾನಗಿ ಕೋರಿ ಸಲ್ಲಿಸಿದ ಅರ್ಜಿ ಪ್ರತಿ, 1ನೇ ಎದುರುದಾರರ ವರದಿ ಪ್ರತಿ, ಅಂದಾಜು ವೆಚ್ಚ ಪ್ರತಿ, ಸಾಮಾನ್ಯ ಸಭೆ ನಡವಳಿ ಪ್ರತಿ, ಲೈಸನ್ಸ್ ಪ್ರತಿ ಸಲ್ಲಿಸಿರುತ್ತಾರೆ. ದೂರುದಾರರು ತಮ್ಮ ಪತ್ರದಲ್ಲಿ ಎದುರುದಾರರ ವಿರುದ್ಧ ಕ್ರಮ ಜರುಗಿಸಲು ಕೋರಿ ಅಕ್ರಮ ಕಟ್ಟಡದ ಕಾಮಗಾರಿ ನಿರಂತರವಾಗಿ ನಡೆಯುತ್ತಿದೆ ಎಂದು ನೆಲ ಮತ್ತು ಎರಡು ಮಹಡಿಯ ವಾಣಿಜ್ಯ ಕಟ್ಟಡ ಕಟ್ಟುತ್ತಿರುವ ಬಗ್ಗೆ ಎರಡು ಫೋಟೋಗಳನ್ನು ಹಾಜರುಪಡಿಸಿರುತ್ತಾರೆ.

4. 1ನೇ ಎದುರುದಾರರ ಆಕ್ಷೇಪಣೆಗಳು:

ಶಿರ್ವ ಗ್ರಾಮದ ಶ್ರೀ ಶ್ರೀಧರ ಪೂಜಾರಿಯವರು ವಾಣಿಜ್ಯ ಸಂಕೀರ್ಣ ಕಟ್ಟಡ ನೆಲ ಹಾಗೂ ಎರಡು ಅಂತಸ್ತು ಸಂಬಂಧಪಟ್ಟ ಸ್ಥಳದ ಆರ್.ಟಿ.ಸಿ., ಸ್ಥಳದ ಐಸ್ಕೇಚ್, ಕ್ರಯ ದಸ್ತಾವೇಜು ಪ್ರತಿ, ಕನ್ವರ್ಶನ್ ಪ್ರತಿ, ಅಂದಾಜು ಪಟ್ಟಿ ಹಾಗೂ ಗ್ರಾಮ ಪಂಚಾಯತು ಶರ್ತಗಳಿಗೆ ಒಪ್ಪಿ ಕಟ್ಟಡ ರಚಿಸುವುದಾಗಿ ಕರಾರು ಪತ್ರ ನೀಡಿದ್ದು, ಸದರಿ ದಾಖಲೆ ಪತ್ರಗಳನ್ನು ದಿನಾಂಕ: 18/05/2013ರ ಸಾಮಾನ್ಯ ಸಭೆಯಲ್ಲಿ ಪರಿಶೀಲಿಸಿ ನಿರ್ಣಯ ನಂ. 5(2)/2013-14 ರಂತೆ ಕಟ್ಟಲು ಗ್ರಾಮ ಪಂಚಾಯತಿಯಲ್ಲಿ ಸರ್ವಾನುಮತದಿಂದ ನಿರ್ಣಯ ಕೈಗೊಂಡು ಪರವಾನಿಗೆ ನೀಡಲಾಗಿದೆ. ಪಂಚಾಯತ್ ಅಭಿವೃದ್ಧಿ ಅಧಿಕಾರಿಯವರು ಸ್ಥಳ ತನಿಖೆ ಮಾಡಿದ್ದು, ಸದರಿಯವರು ಪಂಚಾಯತ್‌ದಿಂದ ನೀಡಲಾದ ಪರವಾನಿಗೆಯಂತೆ ಸೆಟ್‌ಬ್ಯಾಕ್ ಬಿಟ್ಟು ಕಟ್ಟಡದ ರಚಿಸುತ್ತಿದ್ದಾರೆ. ಪಶ್ಚಿಮ ಬದಿ ಆವರಣ ಗೋಡೆ ಇದ್ದು, ಸದರಿ ಆವರಣ ಗೋಡೆಯಿಂದ ನಾಲ್ಕು ಫೀಟು ಅಂತರ ಬಿಟ್ಟು ಹಾಗೂ ಸುತ್ತಲೂ ಸದರಿಯವರ ಗಡಿ ಸ್ಥಳದಿಂದ ಸೆಟ್ ಬ್ಯಾಕ್ ಬಿಟ್ಟು ಕಟ್ಟಡ ರಚಿಸುವುದಾಗಿರುತ್ತದೆ. ಈ ಬಗ್ಗೆ ಪಂಚಾಯತದಿಂದ ಪರಿಶೀಲನೆ ಮಾಡಿರುತ್ತದೆ. ನಗರ ಮತ್ತು ಗ್ರಾಮಾಂತರ ಇಲಾಖೆಯಿಂದ ನಿರಾಕ್ಷೇಪಣಾ ಪತ್ರ ಪಡೆದು ಹಾಜರುಪಡಿಸುವಂತೆ ಸದರಿಯವರಿಗೆ ನೋಟಿಸು ನೀಡಲಾಗಿದೆ. ಸದರಿ ಶ್ರೀ ಶ್ರೀಧರ್ ಪೂಜಾರಿಯವರ ಕಟ್ಟಡ ರಚನೆ ಕಾಮಗಾರಿ ಸಂಪೂರ್ಣಗೊಂಡಿರುವುದಿಲ್ಲ. ಈ ಬಗ್ಗೆ ಮುಂದೆ ವಿದ್ಯುತ್ ಸಂಪರ್ಕ, ಕಟ್ಟಡ ನಂಬರ್ ಇತ್ಯಾದಿ ದೃಢ ಪತ್ರಿಕೆ ನೀಡುವ ಮುಂಚೆ ಸಂಬಂಧಪಟ್ಟ

N. Shreenidhi

ಸ್ಥಳ ತನಿಖೆ ಮಾಡಿದಾಗ ಕಟ್ಟಡ ನಿರ್ಮಾಣದ ಕೆಲಸವು ನಿಲ್ಲಿಸಿರುವುದು ಕಂಡುಬಂದಿರುತ್ತದೆ. ಮುಖ್ಯ ಕಾರ್ಯನಿರ್ವಾಹಣಾಧಿಕಾರಿ, ಜಿಲ್ಲಾ ಪಂಚಾಯತ್, ಉಡುಪಿ ಕಛೇರಿಯ ಸುತ್ತೋಲೆ ಸಂಖ್ಯೆ: 12/2012-13 ದಿನಾಂಕ: 06/08/2012 ರಲ್ಲಿ ಗ್ರಾಮಾಂತರ ಪ್ರದೇಶದಲ್ಲಿ ನೆಲಮಹಡಿ + ಎರಡು ಮಹಡಿ ಕಟ್ಟಡಗಳಿಗೆ ನಗರ ಮತ್ತು ಗ್ರಾಮಾಂತರ ಯೋಜನೆ ಇಲಾಖೆಯಿಂದ ಅನುಮತಿ ಪಡೆಯುವ ಅವಶ್ಯಕತೆ ಇರುವುದಿಲ್ಲ. ಆರೋಪಿತ ಕಟ್ಟಡವು ನೆಲಮಹಡಿ + ಎರಡು ಮಹಡಿ ನಿರ್ಮಾಣವಾಗಿರುವುದರಿಂದ, ಶಿರ್ವ ಗ್ರಾಮ ಪಂಚಾಯತ್, ಉಡುಪಿ ತಾಲ್ಲೂಕು ರವರಿಂದ ಪರವಾನಿಗೆಯನ್ನು ಪಡೆದಿರುವುದು ಗಮನಿಸಲಾಗಿರುತ್ತದೆ. ದೂರಿನಲ್ಲಿ ಮಾಡಿರುವ ಆರೋಪಗಳು ಸಾಬೀತಾಗಿಲ್ಲವೆಂದು ಅಭಿಪ್ರಾಯ ಪಡಲಾಗಿದೆ. ದಿನಾಂಕ: 27/01/2017 ರಂದು ನಡೆಸಿದ ಸ್ಥಳ ತನಿಖೆಯ ಸ್ಥಳ ಮಹಜರ್‌ನ ಮೂಲ ಪ್ರತಿ, ಇತರೆ ಪತ್ರಗಳು, ಚಿತ್ರೀಕರಿಸಿರುವ 'ವಿಡಿಯೋ ಸಿಡಿ', ಛಾಯಾಚಿತ್ರಗಳು ಹಾಗೂ ನಂತರದಲ್ಲಿ ಸಂಬಂಧಪಟ್ಟ ಅಧಿಕಾರಿಗಳಿಂದ ಪಡೆದ ಎಲ್ಲಾ ದಾಖಲೆಗಳನ್ನು ಸಲ್ಲಿಸಲಾಗಿದೆ.

ಸದರಿ ಸುತ್ತೋಲೆ ದಿನಾಂಕ: 06/08/2012ರ ಪ್ರತಿ ತನಿಖಾ ಅವಧಿಯಲ್ಲಿ ಸಂಗ್ರಹಿಸಲಾಗಿರುತ್ತದೆ. ಸದರಿ ಸುತ್ತೋಲೆಯಲ್ಲಿ ಗ್ರಾಮ ಪಂಚಾಯತಿಯ ವ್ಯಾಪ್ತಿಯ ಜಿ+2 ವಸತಿ ಕಟ್ಟಡ ಹೊರತುಪಡಿಸಿ ಉಳಿದ ಕಟ್ಟಡಗಳಿಗೆ ಪರವಾನಗಿ ನೀಡುವ ಸಂದರ್ಭದಲ್ಲಿ ಜಿ+2 ಗಿಂತ ಹೆಚ್ಚಿಗೆ ಇರುವ ವಸತಿ ಕಟ್ಟಡ ಪರವಾನಿಗೆಗೆ ಅರ್ಜಿ ಸಲ್ಲಿಸುವ ಮುನ್ನ ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆಯ ನಕ್ಷೆ ಮತ್ತು ಪ್ಲಾನ್ ಪಡೆಯುವ ಷರತ್ತು ವಿಧಿಸಲಾಗಿದೆ.

ಪರವಾನಗಿ ಪ್ರತಿಯಲ್ಲಿ ನೆಲ, 1ನೇ ಅಂತಸ್ತು ವಾಣಿಜ್ಯ, 2ನೇ ಅಂತಸ್ತು ವಾಸ್ತವ್ಯ ಎರಡು ಮನೆಗಳು ಕಟ್ಟಲು ಅನುಮತಿಸಿದೆ.

7. ಫಿರ್ಯಾದುದಾರರು, ಎದುರುದಾರರ ಆಕ್ಷೇಪಣೆಗಳನ್ನು, ತನಿಖಾಧಿಕಾರಿಗಳ ವರದಿಯ ಅಂಶಗಳನ್ನು ಪೂರ್ಣವಾಗಿ ನಿರಾಕರಿಸಿ ಎದುರುದಾರರ ವಿರುದ್ಧ ಕ್ರಮ ಜರುಗಿಸಲು ಕೋರಿರುತ್ತಾರೆ.

ಫಿರ್ಯಾದುದಾರರು ತಮ್ಮ ಪ್ರತ್ಯುತ್ತರದ ಜೊತೆ ದಿನಾಂಕ: 30/07/2012ರ ಸುತ್ತೋಲೆಯ ಪ್ರತಿಯನ್ನು ಸಲ್ಲಿಸಿದ್ದು ಜಿಲ್ಲಾಧಿಕಾರಿಗಳು, ಉಡುಪಿ ರವರು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್, ಉಡುಪಿ ರವರಿಗೆ ಮಾರ್ಗಸೂಚಿಗಳನ್ನು ನೀಡಿದ್ದು ಸದರಿ ಸುತ್ತೋಲೆಯ 3ನೇ ಮಾರ್ಗಸೂಚಿಯಲ್ಲಿ ನೀಡಿದ ಸೂಚನೆ ಈ ರೀತಿ ಇರುತ್ತದೆ. ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ಸ್ವಂತ ವಾಸ್ತವ್ಯದ ಉದ್ದೇಶಕ್ಕೆ ನೆಲಅಂತಸ್ತು ಮತ್ತು ಮೊದಲನೇ ಮಹಡಿಯವರೆಗೆ ಆಯಾ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು, ನಿಯಮಾನುಸಾರ ಕಟ್ಟಡ ಕಟ್ಟಲು ಪರವಾನಿಗೆ ನೀಡುವಂತೆಯೂ ಹಾಗೂ

N. [signature]

ವಾಸ್ತವ್ಯೇತರ ಕಟ್ಟಡಗಳು, ಎರಡನೇ ಮಹಡಿ ಹಾಗೂ ಮೀರಿದ ವಸತಿ ಕಟ್ಟಡಗಳಿಗೆ ಹಾಗೂ ವಸತಿ ಸಮುಚ್ಚಯ ಕಟ್ಟಡಗಳಿಗೆ (ಫ್ಲಾಟ್ಸ್) ಪರವಾನಿಗೆ ನೀಡುವ ಮೊದಲು ತಾಂತ್ರಿಕ ಅಭಿಪ್ರಾಯವನ್ನು ಸಹಾಯಕ ನಿರ್ದೇಶಕರು, ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆ, ಉಡುಪಿ ಇವರಿಂದ ಕಡ್ಡಾಯವಾಗಿ ಪಡೆಕೊಳ್ಳಲು ತಿಳಿಸುವುದು.

8. ತನಿಖಾ ಅವಧಿಯಲ್ಲಿ 1 ಮತ್ತು 2ನೇ ಎದುರುದಾರರು ತಮ್ಮ ಆಕ್ಷೇಪಣೆಗಳನ್ನು ಸಲ್ಲಿಸಿದ್ದು ಸದರಿ ಆಕ್ಷೇಪಣೆಗಳನ್ನು ಪರಿಗಣಿಸಲು ಯೋಗ್ಯವಾಗಿರುವುದಿಲ್ಲ. ಸಂಗ್ರಹಿಸಿದ ಆಧಾರಗಳಿಂದ ಶ್ರೀಧರ್ ಪೂಜಾರಿ ರವರಿಗೆ ಶಿರ್ವ ಗ್ರಾಮದ ಸರ್ವೆ ನಂ. 308/13ಎ/ಪಿ4 ಮತ್ತು 22ಪಿ3 ಜಾಗದಲ್ಲಿ ವಾಣಿಜ್ಯ ಕಟ್ಟಡ ಕಟ್ಟಲು ಪರವಾನಗಿ ನೀಡಿದ್ದು ಸದರಿ ಅವಧಿಯಲ್ಲಿ ಎದುರುದಾರರು ಸದರಿ ಹುದ್ದೆಗಳಲ್ಲಿ ಕರ್ತವ್ಯ ನಿರ್ವಹಿಸಿದ್ದು ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆಯವರು ನೀಡಿದ ನಕ್ಷೆಯನ್ನು ತಾಂತ್ರಿಕ ಅನುಮೋದನೆಯನ್ನು ಲಗತ್ತಿಸದಿದ್ದರೂ ಎದುರುದಾರರಿಗೆ ಪರವಾಗಿ ನೀಡಿದ್ದು ದಿನಾಂಕ: 06/08/2012ರ ಹಾಗೂ 30/07/2012ರ ಸುತ್ತೋಲೆಯ ನಿಯಮಗಳನ್ನು ಉಲ್ಲಂಘಿಸಿರುವುದು ತನಿಖಾ ಕಾಲದಲ್ಲಿ ಮೇಲ್ನೋಟಕ್ಕೆ ಕಂಡುಬಂದಿರುತ್ತದೆ.

9. 2ನೇ ಎದುರುದಾರರಾದ–ಶ್ರೀ ಹಸನಬಾ ಶೇಖ್, ಅಧ್ಯಕ್ಷರು, ಶಿರ್ವ ಗ್ರಾಮ ಪಂಚಾಯತ್, ಉಡುಪಿ ತಾಲ್ಲೂಕು ಮತ್ತು ಜಿಲ್ಲೆ ಚುನಾಯಿತ ಪ್ರತಿನಿಧಿಗಳಾಗಿರುವುದರಿಂದ, ಕರ್ನಾಟಕ ಪಂಚಯತ್ ರಾಜ್ ಅಧಿನಿಯಮದ ಪ್ರಕಾರ ಮುಂದಿನ ಕ್ರಮ ಕೈಗೊಳ್ಳುವಂತೆ ಶಿಸ್ತು ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಿದೆ.

10. ಮೇಲೆ ಚರ್ಚಿಸಿದ ಕಾರಣಗಳ ಹಿನ್ನೆಲೆಯಲ್ಲಿ, ಕರ್ನಾಟಕ ನಾಗರೀಕ ಸೇವೆ (ನಡತೆ) ನಿಯಮ 1966ರ ನಿಯಮಗಳು 3(1)(ii) ಮತ್ತು (iii) ರನ್ವಯ 1ನೇ ಎದುರುದಾರರು ಶಿಸ್ತು ಕ್ರಮಕ್ಕೆ ಬಾಧ್ಯರಾಗಿರುತ್ತಾರೆಂದು ಕಂಡುಬಂದಿದ್ದರಿಂದ, **1ನೇ ಎದುರುದಾರರಾದ** ಶ್ರೀಮತಿ ಮಾಲತಿ, ಹಿಂದಿನ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು, ಶಿರ್ವ ಗ್ರಾಮ ಪಂಚಾಯತ್, ಉಡುಪಿ ತಾಲ್ಲೂಕು ಮತ್ತು ಜಿಲ್ಲೆ ಇವರ ವಿರುದ್ಧ ಶಿಸ್ತು ನಡವಳಿಕೆ ಕ್ರಮ ಜರುಗಿಸಲು ಮತ್ತು ಹಾಗೆಯೇ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿರ್ಬಂಧ ಮತ್ತು ಮೇಲ್ಮನವಿ) ನಿಯಮಗಳು, 1957ರ ನಿಯಮ 14–ಎ ರ ಅಡಿಯಲ್ಲಿ ಇಲಾಖಾ ವಿಚಾರಣ ನಡಸಲು ಹಾಗೂ ಈ ಪ್ರಾಧಿಕಾರಕ್ಕೆ ಒಪ್ಪಿಸುವಂತ ಕರ್ನಾಟಕ ಲೋಕಾಯುಕ್ತ ಕಾಯ್ದೆ ಕಲಂ 12(3) ರನ್ವಯ ಪ್ರದತ್ತವಾದ ಅಧಿಕಾರದಡಿ, ಶಿಸ್ತು ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಿದೆ.

11. ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(4)ರ ಪ್ರಕಾರ, ಶಿಸ್ತು ಪ್ರಾಧಿಕಾರವು ವರದಿಯನುಸಾರ ಕೈಗೊಂಡ ಕ್ರಮದ ಬಗ್ಗೆ ಅಥವಾ ಕೈಗೊಳ್ಳಬಹುದಾದ ಕ್ರಮದ ಬಗ್ಗೆ, ಈ ವರದಿ ತಲುಪಿದ ದಿನಾಂಕದಿಂದ **ಮೂರು ತಿಂಗಳೊಳಗಾಗಿ** ಈ ಪ್ರಾಧಿಕಾರಕ್ಕೆ ವರದಿ ಮಾಡಲು ಸೂಚಿಸಲಾಗಿದೆ.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

[ನ್ಯಾಯಮೂರ್ತಿ ಎನ್. ಆನಂದ]
ಉಪಲೋಕಾಯುಕ್ತರು,
ಕರ್ನಾಟಕ ರಾಜ್ಯ, ಬೆಂಗಳೂರು.